ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1500 (1656)
ಸದಸ್ಯರ ಹೆಸರು	:	ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	14.03.2022
ಉತ್ತರಿಸುವವರು	:	ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಷ್ಟ್ರೀಯ ಅರಣ್ಯ ನೀತಿ ಅನ್ವಯ ರಾಜ್ಯದಲ್ಲಿನ ಭೂ ಪ್ರದೇಶಕ್ಕೆ ಅನುಗುಣವಾಗಿ ಅರಣ್ಯ ಪ್ರದೇಶವು ಇದೆಯೇ;	ರಾಷ್ಟ್ರೀಯ ಅರಣ್ಯ ನೀತಿ 1988 ರನ್ವಯ ರಾಜ್ಯದ ಒಟ್ಟು ಭೂ ಪ್ರದೇಶದ 33%ರಷ್ಟು ಭಾಗ ಅರಣ್ಯ ಹೊಂದಿರತಕ್ಕದ್ದು. ಕರ್ನಾಟಕ ರಾಜ್ಯದ ಒಟ್ಟು ಭೂ ಪ್ರದೇಶದ 22%ರಷ್ಟು ಮಾತ್ರ ಅರಣ್ಯ ಪ್ರದೇಶವಾಗಿರುತ್ತದೆ.
ಆ)	ಧಾರವಾಡ, ಹಾವೇರಿ, ಗದಗ ಜಿಲ್ಲೆಗಳಲ್ಲಿ ಅರಣ್ಯ ಹಕ್ಕು ಕಾಯಿದೆ ಅಡಿ ಭೂಮಿ ಮಂಜೂರಾತಿಗಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು; ಇದುವರೆಗೂ ಎಷ್ಟು ಅರ್ಜಿಗಳನ್ನು ಇತ್ಯರ್ಥಗೊಳಿಸಲಾಗಿದೆ; ಬಾಕಿ ಇರುವ ಅರ್ಜಿಗಳು ಎಷ್ಟು;	ಸಮಾಜ ಕಲ್ಯಾಣ ಇಲಾಖೆಯಿಂದ ಒದಗಿಸಿದ ಮಾಹಿತಿಯಂತೆ ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 (2007ರ2) ಮತ್ತು 2008 ತಿದ್ದುಪಡಿ ನಿಯಮಗಳು 2012ರ ಪ್ರಗತಿ:

ಜಿಲ್ಲೆ	ಸ್ವೀಕೃತ ಗೊಂಡ ಅರ್ಜಿಗಳ ಸಂಖ್ಯೆ	ವಿತರಿಸಿರುವ ಹಕ್ಕು ಪತ್ರಗಳ ಸಂಖ್ಯೆ	ತಿರಸ್ಕೃತಗೊಂಡಿರುವ ಅರ್ಜಿಗಳ ಸಂಖ್ಯೆ.	ಇತ್ಯರ್ಥವಾಗದ ಬಾಕಿ ಇರುವ ಅರ್ಜಿಗಳ ಸಂಖ್ಯೆ
ಧಾರವಾಡ	1418	45	1289	84
ಹಾವೇರಿ	2829	56	2741	32
ಗದಗ	2368	619	1387	362
ಒಟ್ಟು	6615	720	5417	478
ಧಾರವಾಡ				
ಪರಿಶಿಷ್ಟ ಪಂಗಡ	194	36	103	55
ಇತರ ಪಾರಂಪರಿಕ ಅರಣ್ಯ ವಾಸಿಗಳು	1202	0	1173	29
ಸಮುದಾಯ ಹಕ್ಕುಗಳು	22	9	13	0
ಒಟ್ಟು	1418	45	1289	84
ಹಾವೇರಿ				
ಪರಿಶಿಷ್ಟ ಪಂಗಡ	358	56	299	3
ಇತರ ಪಾರಂಪರಿಕ ಅರಣ್ಯ ವಾಸಿಗಳು	2467	0	2439	28
ಸಮುದಾಯ ಹಕ್ಕುಗಳು	4	0	3	1
ಒಟ್ಟು	2829	56	2741	32

ಗದಗ				
ಪರಿಶಿಷ್ಟ ಪಂಗಡ	91	6	85	0
ಇತರ ಪಾರಂಪರಿಕ ಅರಣ್ಯ ವಾಸಿಗಳು	2277	613	1302	362
ಸಮುದಾಯ ಹಕ್ಕುಗಳು	0	0	0	0
ಒಟ್ಟು	2368	619	1387	362

ಇ)	ಅರಣ್ಯ ಹಕ್ಕು ಕಾಯಿದೆ ಅಡಿ ಬಂದಿರುವ ಅರ್ಜಿಗಳನ್ನು ನಿಗದಿತ ಸಮಯದಲ್ಲಿ ಇತ್ಯರ್ಥ ಪಡಿಸಲು ಸರ್ಕಾರಕ್ಕೆ ಇರುವ ಸಮಸ್ಯೆಗಳೇನು?	ಸಮಾಜ ಕಲ್ಯಾಣ ಇಲಾಖೆಯಿಂದ ಒದಗಿಸಿದ ಮಾಹಿತಿಯಂತೆ ಅರಣ್ಯ ಹಕ್ಕು ಕಾಯ್ದೆಯಡಿ ಸಲ್ಲಿಸಿರುವ ಅರ್ಜಿಗಳನ್ನು ಇತ್ಯರ್ಥಗೊಳಿಸಲು ಇರುವ ಪ್ರಮುಖ ಸಮಸ್ಯೆಗಳು 1. ಕ್ಷೇಮುದಾರರು ಕಂದಾಯ ಭೂಮಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ. 2. ಇತರ ಪಾರಂಪರಿಕ ಅರಣ್ಯ ವಾಸಿಗಳು 75 ವರ್ಷಗಳಿಂದ ಅರಣ್ಯ ಭೂಮಿಯನ್ನು ಅವಲಂಬಿಸಿರುವುದಕ್ಕೆ ಅಗತ್ಯ ದಾಖಲೆಗಳನ್ನು ಒದಗಿಸಲು ವಿಫಲರಾಗಿರುತ್ತಾರೆ. 3. ಒಂದೇ ಕುಟುಂಬದಲ್ಲಿ ಬಹುಮಂದಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ 4. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರು ಉಪವಿಭಾಗ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿ ಸದಸ್ಯರಾಗಿದ್ದು, ಪ್ರಸ್ತುತ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರ ಅಧಿಕಾರವಧಿ ಪೂರ್ಣಗೊಂಡಿರುತ್ತದೆ. ಆದಕಾರಣ ನಿಯಮಿತವಾಗಿ ಸಮಿತಿ ಸಭೆ ಕರೆಯಲು ಸಾಧ್ಯವಾಗುತ್ತಿಲ್ಲ. 5. ಅರಣ್ಯ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಲು ಕೊನೆ ದಿನಾಂಕ ನಿಗದಿಪಡಿಸಿರುವುದಿಲ್ಲ.

ಸಂಖ್ಯೆ: ಅಪಜೀ 37 ಎಫ್‌ಎಎಫ್ 2022

(ಉಮೇಶ್ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು